ಜ್ಯೂಸ್‌ಗಳಲ್ಲಿ ಪಳಗಿದವರಿಗೆ ಇದರ ರುಚಿಯ ಹಿಂದಿನ ರಹಸ್ಯ ತಿಳಿಯುವುದು ಕಷ್ಟವಾಗಲಿಲ್ಲ. ಸರಿ, ಇವರ ತಯಾರಿ ಶುರುವಾಯಿತು.

ಮರುದಿನ ಸಂಜೆ ಪೆಂಡೆಂ ಸೋಡಾ ಸೆಂಟರ್ ಬಾಗಿಲಿಗೆ ಹೊಸ ಬೋರ್ಡ್ ಕಟ್ಟಲಾಗಿತ್ತು. ಅದರಲ್ಲಿ, "ಪೆಂಡೆಂ ಅವರ ಹೊಸ ಪಾನೀಯ – ಪೆಂಡೆಂ ಕೋಲಾ – ಇಂದೇ ಒಮ್ಮೆ ರುಚಿ ನೋಡಿ" ಅಂತ ಬರೆದಿತ್ತು.

"ಓಹೋ! ನಮ್ಮ ಚಂದ್ರಣ್ಣ ಕೂಡಾ ಕೋಲಾ ತಯಾರು ಮಾಡಿದ್ದಾನಂತೆ ಮಾರಾಯರೇ. ನೋಡುವ" ಅಂದರು. ಮೊದಲಿಗೆ ಆ ಹೊಸಥರದ ರುಚಿಗೆ ಆಶ್ಚರ್ಯಪಟ್ಟರು. ಆದರೂ ಮತ್ತೊಮ್ಮೆ ರುಚಿನೋಡಿ, "ಭಲೇ, ಭಲೇ! ಅದಕ್ಕಿಂತ ಇದು ಚೆನ್ನಾಗಿದೆಯಲ್ಲವೇ'' ಅಂದರು. ಚಂದ್ರಣ್ಣನಿಗೆ ಶಭಾಷ್‌ಗಿರಿ ಕೊಟ್ಟರು. ಕೋಕಾ–ಕೋಲಾಗಿಂತ ಕಡಿಮೆದರದಲ್ಲಿ ಅದಕ್ಕಿಂತಲೂ ಒಳ್ಳೆಯ ರುಚಿಯೊಂದಿಗೆ ಸಿಗುತ್ತಿದ್ದ ಪೆಂಡೆಂ ಕೋಲಾ ವ್ಯಾಪಾರ ಗೆದ್ದಿತು. ವಿದೇಶೀ ಕೋಲಾಗೆ ಬೇಡಿಕೆಯೇ ಇಲ್ಲವಾಯಿತು.

ಶೇಷಾರೆಡ್ಡಿ ತಾನು ಸಹ ಚಂದ್ರಣ್ಣನ ಪೆಂಡೆಂಕೋಲಾ ತರಿಸಿ ರುಚಿ ನೋಡಿದ. ಇದರ ಮುಂದೆ ತನ್ನ ವಿದೇಶೀ ಕೋಲಾ ನಿಲ್ಲುವುದಿಲ್ಲವೆಂದು ಗೊತ್ತಾಯಿತು. ಕಂಗಾಲಾಗಿ ಮದ್ರಾಸಿಗೆ ವಿಷಯ ಮುಟ್ಟಿಸಿದ. ಕಂಪನಿಯ ಜನರಲ್ ಮ್ಯಾನೇಜರ್ ಓಡಿ ಬಂದು, "ಚಂದ್ರಣ್ಣನವರೇ... ಹಿರಿಯರಾದ ನೀವು ಮಾಡಿದ್ದು ಸರಿಯಲ್ಲ. ನಮ್ಮ ಕೋಲಾವನ್ನು ನಕಲು ಮಾಡಿದ್ದಕ್ಕೆ ನಿಮ್ಮ ಮೇಲೆ ನ್ಯಾಯಾಲಯದಲ್ಲಿ ದಾವೆ ಹಾಕಬೇಕಾಗಬಹುದು, ದಯವಿಟ್ಟು ಅರ್ಥಮಾಡಿಕೊಳ್ಳಿ" ಅಂದ.

"ನಿನಗೆ ತೋಚಿದ್ದು ಮಾಡಬಹುದು" ಅಂದ ಚಂದ್ರಣ್ಣ ಬೆದರದೆ.

ಆ ವಿದೇಶಿ ಕಂಪನಿಯ ಅಧಿಕಾರಿ ಸುಮ್ಮನಾದ. ಮೊಕದ್ದಮೆಯೇನೂ ಹಾಕಲಿಲ್ಲ. ಆದರೂ ಯಾರು ಕೊಳ್ಳಲಿ ಬಿಡಲಿ ಊರಿಗೆ ಅದು ಸರಬರಾಜು ಆಗುತ್ತಲೇ ಹೋಯಿತು. ಹೊಸ ವಿನ್ಯಾಸದ ಬಾಟಲಿಗಳಲ್ಲಿ ವಿವಿಧ ಗಾತ್ರದಲ್ಲಿ ಜನರನ್ನು ಆಕರ್ಷಿಸುವ ಪ್ರಯತ್ನ ನಡೆದೇ ಇತ್ತು. ಸಿನಿಮಾದವರಿಂದ, ಮಧ್ಯದ ವ್ಯಾಪಾರಿಗಳಿಂದಲೂ ಇದನ್ನು ಹೊಗಳಿ ಮಾರಾಟ ಹೆಚ್ಚಿಸುವ ಪ್ರಯತ್ನ ನಿರಂತರವಾಗಿ ನಡೆದೇ ಇತ್ತು.

ಒಟ್ಟಿನಲ್ಲಿ ಚಂದ್ರಣ್ಣ ಒಂಟಿ ಸಲಗದಂತೆ ನಿಂತಲ್ಲೇ ತನ್ನ ದೇಶಿ ಕತ್ತಿ ಝಳಪಿಸುತ್ತಾ ಯುದ್ಧ ಮಾಡುತ್ತಿದ್ದ. ಆದರೆ ಆ ವಿದೇಶೀ ಪಾನೀಯ ಸುತ್ತ ಮುತ್ತಲಿನ ನೆಲವನ್ನು ನಿಧಾನವಾಗಿ ಕಬಳಿಸುತ್ತಾ ಅವನೆಡೆಗೆ ಬರುತ್ತಿತ್ತು. ಹೀಗೆ ಸುಮಾರು ಮೂರು ನಾಲ್ಕು ವರ್ಷವಾಗುವಷ್ಟರಲ್ಲಿ ಜನರೂ ಕ್ರಮೇಣ ವಿದೇಶಿ ಪಾನೀಯಕ್ಕೂ ಒಗ್ಗಿಕೊಂಡುಬಿಟ್ಟರು. ಮರಕ್ಕೆ ಹಿಡಿದ ಗೆದ್ದಲು ಒಳಗೊಳಗೇ ನಿಧಾನವಾಗಿ ತಿಂದು ಹಾಕಿ ಗೊತ್ತೇ ಆಗದಂತೆ ಮರವನ್ನು ಟೊಳ್ಳು ಮಾಡಿ ಬಿಡುವಂತೆ, ಚಂದ್ರಣ್ಣನ ಪೆಂಡೆಂ ಸೋಡಾ ಸೆಂಟರಿಗೂ ಆಯಿತು. ಬರುಬರುತ್ತಾ ಮಾರಾಟ ಪೂರ್ತಿ ಕಡಿಮೆಯಾಯಿತು. ಸುಗಂಧ ಸೋಡಾಗಾಗಿ, ರೇಡಿಯೊದಲ್ಲಿ ವಾರ್ತೆಗಳನ್ನು ಕೇಳುವುದಕ್ಕೆ ಬರುವವರ ಸಂಖ್ಯೆಯೂ ಬಿದ್ದು ಹೋಯಿತು. ಜಿಂಜರ್ ಸೋಡಾ, ಆರೆಂಜ್, ದ್ರಾಕ್ಷಿ ಸೋಡಾ ಕೇಳುವವರಿಲ್ಲವಾಯಿತು. ದೇಶಭಕ್ತರ ಬಗ್ಗೆ ಸ್ವಾತಂತ್ರ ಹೋರಾಟದ ಬಗ್ಗೆ ನೆನೆಯುವವರು ಮಾತಾಡುವವರು ಕಡಿಮೆಯಾದರು.

ಪೆಂಡೆಂ ಸೋಡಾ ಸೆಂಟರಿನಲ್ಲಿ ಇತ್ತೀಚೆಗೆ ಚಂದ್ರಣ್ಣನೊಬ್ಬನೇ ಖಾದೀ ಬಟ್ಟೆಯಲ್ಲಿ ಬಿಳಿಹುಲಿಯಂತೆ ಗಂಭೀರವಾಗಿ ಕುಳಿತಿರುತ್ತಾನೆ. ದೃಷ್ಟಿ ಮಸುಕಾಗಿದೆ. ಆರೋಗ್ಯ ಕೈಕೊಡುತ್ತಿದೆ. ಸೋಡಾ ಕೊಡಬೇಕಾದರೆ ಕೈ ನಡುಗುತ್ತದೆ.

"ಅಪ್ಪಾ, ಇನ್ನು ಇದೆಂಥ ದುಡಿಮೆ ನಿಮ್ಮದು. ಮನೆಯಲ್ಲಿ ಆರಾಮಾಗಿ ಇರಬಹುದಿತ್ತಲ್ಲವೇ?" ಅನ್ನುತ್ತಾನೆ ಮಗ.